# ಔರಂಗಜೇಬ್ 1658-1707

1. ಪೀಠಿಕೆ
2. ಪ್ರಾರಂಭೀಕ ಜೀವನ
3. ಪ್ರಾರಂಭೀಕ ಸಾಧನೆಗಳು.
4. ಸಿಂಹಾಸನಕ್ಕಾಗಿ ಉತ್ತಾರಾಧೀಕಾರತ್ವ ಹೋರಾಟ
5. ಸಿಂಹಾಸನರೋಹಣ
6. ವಿದೇಶಾಂಗ ನೀತಿ
   - ಪೌರ್ವಾತ್ಯ ನೀತಿ
   - ಪೋರ್ಚಗೀಸ್‌ರರೋಡನೆ ಅನುಸರಿಸಿದ ನೀತಿ
   - ವಾಯುವ್ಯ ಗಡಿ ನೀತಿ
   - ದಕ್ಷಿಣ ನೀತಿ
   - ಹಿಂದೂ ನೀತಿ
7. ಆಂತರೀಕ ನೀತಿ
8. ಕೊನೆಯದಿನಗಳು ಮತ್ತು ಮರಣ
9. ವ್ಯಕ್ತಿತ್ವ ಮತ್ತು ವಿಮರ್ಶೆ

**ಪೀಠಿಕೆ**

ಔರಂಗಜೇಬ್(3ನವೆಂಬರ್1618–3ಮಾರ್ಚ್1707), ಭಾರತದ ಆರನೆಯ ಮೊಘಲ್ ಚಕ್ರವರ್ತಿ. ಷಾಜಹಾನನ ಮೂರನೆಯ ಮಗ. ಇವನು 1659 ರಿಂದ 1707 ರವರೆಗೆ 49 ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಇವನು ಒಬ್ಬ ವಿಸ್ತರಣಾವಾದಿಯಾಗಿದ್ದು ಇವನ ಕಾಲದಲ್ಲಿ ಮೊಘಲ ಸಾಮ್ರಾಜ್ಯವು ತನ್ನ ಅತ್ಯಂತ ವಿಸ್ತಾರವಾಗಿತ್ತು.ಇವನು ಒಬ್ಬ ಕಟ್ಟಾ ಮುಸ್ಲಿಮನಾಗಿದ್ದು, ಹಿಂದು ಧರ್ಮ ವಿರೋಧಿಯಾಗಿದ್ದನು. ಅಕ್ಬರನ ಕಾಲದಲ್ಲಿದ್ದ ಜಾತ್ಯಾತೀತ ತತ್ವಗಳನ್ನು ಬದಿಗೆ ತಳ್ಳಿದ್ದನು.ಇವನ ಆಡಳಿತದಲ್ಲಿ ಧರ್ಮ ಅಸಹಿಷ್ಣುತೆಯು ತಾಂಡವವಾಡುತ್ತಿತ್ತು. ಇವನು ಒಬ್ಬ ಉತ್ತಮ ಆಡಳಿತಗಾರನಾಗಿದ್ದು ಇವನ ಕಾಲದಲ್ಲಿ ಮೊಘಲ್ ಸಾಮ್ರಾಜ್ಯವು ತನ್ನ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತ್ತು. ಇವನ ನಿಧನಾನಂತರ ಮೊಘಲ್ ಸಂತತಿ ವೇಗವಾಗಿ ತನ್ನ ಅವನತಿಯನ್ನು ಕಂಡಿತು.

**ಬಾಲ್ಯ**

1618ರ ನವೆಂಬರ್ 23 ರಂದು ಗುಜರಾತಿನ ದೋಹಾದಿನಲ್ಲಿ ಜನಿಸಿದ. ತಾಯಿ ಮಮ್ತಾಜ್ ಮಹಲ್. ಚಿಕ್ಕಂದಿನಲ್ಲಿ ಈತ ಒಳ್ಳೆಯ ಶಿಕ್ಷಣ ಪಡೆದ. ಅರಬ್ಬೀ ಮತ್ತು ಪಾರಸೀ ಭಾಷೆಯನ್ನು ಚೆನ್ನಾಗಿ ಅರಿತ. ಈತನ ತಾಯಿನುಡಿ ಉರ್ದು. ಹಿಂದಿ ಮತ್ತು ತುರ್ಕಿ ಭಾಷೆಗಳಲ್ಲಿ ಮಾತಾಡಬಲ್ಲವನೂ ಆಗಿದ್ದ.

**ರಾಜಕೀಯ ಜೀವನ**

1636ರಲ್ಲಿ ದಖನ್ ಪ್ರಾಂತ್ಯಗಳ ರಾಜ್ಯಪಾಲನಾಗಿ ನೇಮಕವಾದಾಗಲೇ ಈತನ ಯೋಗ್ಯತೆ ಪ್ರಥಮವಾಗಿ ಪ್ರಕಾಶಕ್ಕೆ ಬಂತು. ಆದರೆ ಅಣ್ಣನಾದ ದಾರಾಗೂ ಈತನಿಗೂ ಮನಸ್ತಾಪ ಬಂದುದರಿಂದ ಔರಂಗಜೇಬ್ ಈ ಹುದ್ದೆಗೆ ರಾಜೀನಾಮೆ ಕೊಟ್ಟ. ಮರುವರ್ಷ ಇವನಿಗಾಗಿ ಗುಜರಾತಿನ ರಾಜ್ಯಪಾಲ ಹುದ್ದೆ ಕಾದಿತ್ತು. 1647ರಲ್ಲಿ ಇವನನ್ನು ಬಲ್ಖ್ ಮತ್ತು ಬಡಕ್ಷಾನ್ ಪ್ರದೇಶಕ್ಕೆ ಕಳಿಸಲಾಯಿತು. ಮಧ್ಯ ಏಷ್ಯದಲ್ಲಿ ಮೊಗಲರಿಗೆ ಹಿಂದೆ ಸೇರಿದ್ದ ಪ್ರಾಂತ್ಯಗಳನ್ನು ಗೆಲ್ಲಬೇಕೆಂದು ತಂದೆ ಷಾಜಹಾನನ ಆಕಾಂಕ್ಷೆಯಾಗಿತ್ತು. ಆದರೆ ಈ ಯುದ್ಧಗಳು ನಿರ್ಣಾಯಕವಾಗಿ ಪರಿಣಮಿಸಲಿಲ್ಲ. ಖಜಾನೆ ಬರಿದಾಯಿತು. ಔರಂಗಜೇಬನ ಶೌರ್ಯಕೌಶಲಗಳು ಅಸಾಧಾರಣವಾದುವಾಗಿದ್ದರೂ ಆ ಚಳಿನಾಡಿನಲ್ಲಿ ಹೋರಾಟ ಮುಂದುವರಿಸುವುದು ಸೂಕ್ತವೆನಿಸಲಿಲ್ಲವಾದ್ದರಿಂದ ತಂದೆ ಇವನನ್ನು

ಹಿಂದಕ್ಕೆ ಕರೆಯಿಸಿಕೊಂಡ. 1648ರಲ್ಲಿ ಈತ ಮುಲ್ತಾನಿನ ರಾಜ್ಯಪಾಲನಾದ. ಮರುವರ್ಷ ಸಿಂಧ್ ಕೂಡ ಇವನ ಆಡಳಿತಕ್ಕೆ ಒಳಪಟ್ಟಿತು. ಪರ್ಷಿಯನ್ನರು ಏರಿಬಂದಿದ್ದ ಕಾಂದಹಾರಿನ ವಿಮೋಚನೆಗಾಗಿ 1649ರಲ್ಲಿ ಇವನನ್ನು ಸೈನ್ಯದೊಂದಿಗೆ ಕಳಿಸಲಾಯಿತು. ಆದರೆ ಔರಂಗಜೇಬ್ ಹೋಗುವ ವೇಳೆಗೆ ಅದು ಅವರಿಗೆ ಅಧೀನವಾಗಿತ್ತು. ಪರ್ಷಿಯನ್ನರನ್ನು ಜಗ್ಗಿಸಲು ಇವನ ಸೈನ್ಯದಿಂದಾಗಲಿಲ್ಲ. ಮೂರು ವರ್ಷಗಳ ಅನಂತರ ಮತ್ತೆ ನಡೆಸಿದ ಯತ್ನವೂ ವಿಫಲವಾಯಿತು. 1652ರಲ್ಲಿ ಈತ ಮತ್ತೆ ದಖನ್ನಿನ ರಾಜ್ಯಪಾಲನಾದ. ಅಲ್ಲಿಯ ಆಡಳಿತವನ್ನು ಸುಧಾರಿಸಿ, ವರಮಾನ ಹೆಚ್ಚಿಸಿದ. ಗೋಲ್ಕಂಡ ಮತ್ತು ಬಿಜಾಪುರಗಳ ಮೇಲೆ ಕ್ರಮವಾಗಿ 1656 ಮತ್ತು 1657ರಲ್ಲಿ ದಂಡೆತ್ತಿಹೋದ. ಆದರೆ ಷಾಜಹಾನ್ ಅಡ್ಡಬಂದುದರಿಂದ ಈ ಆಕ್ರಮಣಗಳನ್ನು ಔರಂಗಜೇಬ್ ಮುಂದುವರಿಸಲಾಗಲಿಲ್ಲ.

**ಅಧಿಕಾರಕ್ಕಾಗಿ ಹೋರಾಟ**

1657 ರಲೀ ಷಾಜಹಾನ್ ಕಾಯಿಲೆಯಿಂದ ಮಲಗಿದ. ತನ್ನ ಹಿರಿಯ ಮಗ ದಾರಾ ಷುಕೋ ಚಕ್ರವರ್ತಿಯಾಗಬೇಕೆಂಬುದು ಷಾಜಹಾನನ ಇಚ್ಛೆಯಾಗಿತ್ತು. ಆತ ತಂದೆಯೊಡನೆಯೇ ದೆಹಲಿಯಲ್ಲಿದ್ದ. ಎರಡನೆಯ ಮಗ ಷೂಜಾ ಬಂಗಾಲದಲ್ಲಿ ರಾಜ್ಯಪಾಲನಾಗಿದ್ದ. ಔರಂಗಜೇಬನ ತಮ್ಮ-ಷಾಜಹಾನನ ಕೊನೆಯ ಮಗ-ಮುರಾದ್ ಇದ್ದದ್ದು ಗುಜರಾತಿನಲ್ಲಿ ರಾಜ್ಯಪಾಲನಾಗಿ. ತಂದೆಯ ಕಾಯಿಲೆಯ ಸುದ್ದಿ ಬಂದೊಡನೆಯೇ ಷೂಜಾ ಬಂಗಾಳದ ಚಕ್ರವರ್ತಿಯೆಂದು ಸಾರಿಕೊಂಡ. ಮುರಾದನೂ ಷೂಜಾನ ಮಾರ್ಗವನ್ನೇ ಅನುಸರಿಸಿದ. ಈ ಸ್ಪರ್ಧೆಯಲ್ಲಿ ಔರಂಗೇಜೇಬ್ ಹಿಂದೆ ಬೀಳಲಿಲ್ಲ. ಸಾಮ್ರಾಜ್ಯವನ್ನು ಎರಡು ಭಾಗ ಮಾಡಿ ತನಗೊಂದು ಪಾಲು ಕೊಡಬೇಕೆಂಬ ಷರತ್ತಿನ ಮೇಲೆ ಮುರಾದನಿಗೆ ಜೊತೆಯಾದ. ಇವರಿಬ್ಬರ ಸಂಯುಕ್ತ ಸೇನೆಗಳಿಗೂ ಷಾಜಹಾನನ ಸೇನೆಗೂ ನಡುವೆ ಯುದ್ಧಗಳು ನಡೆದುವು. ದಾರಾ ಷುಕೋ ಸೋತು ಆಗ್ರಕ್ಕೆ ಪಲಾಯನ ಮಾಡಿದ. ಔರಂಗಜೇಬ್ ಮುರಾದರ ಸೈನ್ಯಗಳು ಬೆನ್ನಟ್ಟಿ ನಡೆದು, ಆಗ್ರವನ್ನು ಮುತ್ತಿ ಗೆದ್ದುವು (1658ರ ಜೂನ್ 8). ಷಾಜಹಾನ್ ಆಮರಣಾಂತ ಬಂದಿಯಾದ.

1657ರಲ್ಲಿ ಗುಜರಾತಿನಲ್ಲಿ ತನ್ನ ದಿವಾನನ ಕೊಲೆ ಮಾಡಿಸಿದನೆಂಬ ಅಪವಾದವನ್ನು ಮುರಾದನ ಮೇಲೆ ಔರಂಗಜೇಬ್ ಹೊರಿಸಿ ಅವನನ್ನು ಮರಣಕ್ಕೆ ಗುರಿಪಡಿಸಿದ. ಈ ನಡುವೆ ದಾರಾನ ಮಗನಿಂದ ಹಿಂದೆಯೇ ಸೋತಿದ್ದ ಷೂಜಾ ಗರಿಗೂಡಿಸಿಕೊಳ್ಳುತ್ತಿದ್ದದ್ದನ್ನು ಅರಿತ ಔರಂಗಜೇಬ್ ಅವನ ವಿರುದ್ಧವಾಗಿ ಖುದ್ದಾಗಿ ಯುದ್ಧ ನಡೆಸಿದಾಗ ಷೂಜಾ ಸೋತ. ಓಡಿಹೋಗುತ್ತಿದ್ದ ಅವನನ್ನು ಔರಂಗಜೇಬ್ ನಸೈನ್ಯ ಬೆನ್ನಟ್ಟಿತು. ಆತ ದಖನ್ನಿಗೆ ಹೋಗಿ ಅಲ್ಲಿಂದ ಅರಕಾನಿಗೆ ಪಲಾಯನ ಮಾಡಿದ. ಅವನೂ ಅವನ ಸಂಸಾರದವರೂ ಅಲ್ಲಿ ನಾಶಹೊಂದಿದರು. ಇನ್ನುಳಿದಿದ್ದವ ದಾರಾ ಮಾತ್ರ. ಆಗ್ರದಿಂದ ಓಡಿಹೋಗಿದ್ದ ಅವನೊಂದಿಗೆ ಔರಂಗಜೇಬ್‌ನಸೈನ್ಯ ಕಾದಿ ಅವನನ್ನು ಹಿಡಿತಂದಿತು. ದಾರಾಗೆ ಔರಂಗ್ಜೇಬನಿಂದ ಆದ ಅವಮಾನ ಅಷ್ಟಿಷ್ಟಲ್ಲ. ಧರ್ಮಭ್ರಷ್ಟನೆಂಬ ಅಪವಾದದ ಮೇಲೆ ಅವನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ತಪ್ಪು ಸಾಬೀತಾಯಿತು. 1659ರ ಆಗಸ್ಟ್ 30ರಂದು ಆತ ಮರಣದಂಡನೆಗೆ ಗುರಿಯಾದ. ಔರಂಗಜೇಬ್‌ನಸೋದರರೆಲ್ಲ ನಿರ್ನಾಮವಾದ ಮೇಲೆ ಅವನಿಗೆ ನಿರಾತಂಕವಾಯಿತು. 1658ರ ಜುಲೈ 21ರಂದೇ ಷಾ ಜಹಾನ್ ಬಂಧನಕ್ಕೊಳಗಾದಾಗ-ಅನೌಪಚಾರಿತನಾಗಿ ಕಿರೀಟಧಾರಿಯಾಗಿದ್ದ ಔರಂಗಜೇಬ್‌ನಕ್ಕೆ ತಡೆಯುವವರು ಯಾರೂ ಇರಲಿಲ್ಲ. 1659ರ ಜೂನಿನಲ್ಲಿ ಆತ ಅಲಂಗೀರ್ (ವಿಶ್ವವಿಜೇತ) ಎಂಬ ಬಿರುದು ತಾಳಿ ಅಧಿಕೃತವಾಗಿ ಸಿಂಹಾಸನವನ್ನೇರಿ ದೀರ್ಘಕಾಲ ಆಳ್ವಿಕೆ ನಡೆಸಿದ.

**ಸಾಮ್ರಾಜ್ಯ ವಿಸ್ತರಣೆ**

ತನ್ನ ಹಿರಿಯರಂತೆ ಔರಂಗಜೇಬನೂ ಭಾರತದಲ್ಲಿ ಮೊಗಲ್ ಚಕ್ರಾಧಿಪತ್ಯವನ್ನು ವಿಸ್ತರಿಸಿದ. ಇವನ ಆಳ್ವಿಕೆಯ ಮೊದಲ ಭಾಗ (1658-81) ಉತ್ತರ ಭಾರತದಲ್ಲಿ ತನ್ನ ಅಧಿಕಾರವನ್ನು ಕ್ರೋಡೀಕರಿಸಿಕೊಳ್ಳುವುದಕ್ಕೇ ವಿನಿಯೋಗವಾಯಿತು. 1662ರಲ್ಲಿ ಪಶ್ಚಿಮ ಅಸ್ಸಾಂ ಇವನ ಅಧೀನವಾಯಿತು. ಔರಂಗಜೇಬ್ 1666ರಲ್ಲಿ ಚಿತ್ತಗಾಂಗನ್ನು ವಶಪಡಿಸಿಕೊಂಡ. ವಾಯವ್ಯಗಡಿನಾಡಿನಲ್ಲಿ ದಂಗೆಯೆದ್ದ (1667) ಆಫ್ಘನರನ್ನು 1675ರ ವೇಳೆಗೆ ಅಡಗಿಸಲಾಯಿತು. ಅನೇಕ ವಿದೇಶೀ ಮುಸ್ಲಿಂ ರಾಜ್ಯಗಳು ಇವನೊಂದಿಗೆ ರಾಯಭಾರ ಸಂಬಂಧ ಬೆಳೆಸಿದುವು. 1679ರಲ್ಲಿ ರಜಪುತರೊಂದಿಗೆ ಔರಂಗಜೇಬ್‌ಯುದ್ಧ ಹೂಡಿದ. 1681ರ ಮೇವಾಡದ ರಾಣನೊಂದಿಗೆ ಶಾಂತಿಯ ಒಪ್ಪಂದ ಮಾಡಿಕೊಳ್ಳಲಾಯಿತು. ಅನಂತರ ಔರಂಗಜೇಬ್‌ನ ಗಮನ ದಕ್ಷಿಣದತ್ತ ತಿರುಗಿತು. 1685ರಲ್ಲಿ

ಈತ ಬಿಜಾಪುರದ ಮುಸ್ಲಿಂ ಷಿಯ ರಾಜ್ಯಗಳನ್ನು ಗೆದ್ದುಕೊಂಡ. 1689ರಲ್ಲಿ ಗೋಲ್ಕಂಡ ಇವನ ಬಗಲಿಗೆ ಬಿತ್ತು. ಹೀಗೆ ಇವನ ಚಕ್ರಾಧಿಪತ್ಯ ಕೋರಮಂಡಲದಿಂದ ಚಿತ್ತಗಾಂಗಿನವರೆಗೂ ಉತ್ತರದಲ್ಲಿ ಹಿಂದೂಕುಷ್ವರೆಗೂ ಹಬ್ಬಿತಾದರೂ ದಖನ್ ಪ್ರದೇಶ ಇವನಿಗೆ ತೊಂದರೆ ಕೊಡುತ್ತಲೇ ಇತ್ತು. ಮರಾಠರನ್ನು ಅಡಗಿಸುವುದು ಸಾಧ್ಯವಾಗಲಿಲ್ಲ. 1689ರಲ್ಲಿ ಶಿವಾಜಿಯ ಮಗನಾದ ಶಂಭುಜಿಯನ್ನು ಹಿಡಿದು ಕೊಲ್ಲಲಾಯಿತು. ರಾಜಧಾನಿ ರಾಯಗಢವೂ ವಶವಾಯಿತು. ಶಿವಾಜಿಯ ಕಿರಿಯ ಮಗ ಸಾಹುವನ್ನು ಔರಂಗಜೇಬ್ ಸೆರೆಯಲ್ಲಿಟ್ಟ. ತಂಜಾವೂರು ತಿರುಚಿನಾಪಳ್ಳಿಗಳ ಹಿಂದೂ ರಾಜರು ಔರಂಗಜೇಬನ ಸಾಮಂತರಾದರು.

**ಅವನತಿಯ ಹಾದಿ**

ಆದರೂ ಔರಂಗಜೇಬ್‌ನಿಗೆ ನೆಮ್ಮದಿ ದೊರಕಲಿಲ್ಲ. ಇವನ ಮಹಾ ಸಾಮ್ರಾಜ್ಯದ ಅತಿಯಾದ ವಿಸ್ತೀರ್ಣವೇ ಒಂದು ಹೊರೆಯಾಯಿತು. ಇದರ ಮೇಲೆ ಹತೋಟಿ ಇಟ್ಟುಕೊಳ್ಳುವುದು ಸುಲಭವಾಗಲಿಲ್ಲ. ಒಂದು ಕೇಂದ್ರದಿಂದ ಒಬ್ಬನ ನಿರ್ವಹಣೆಗೆ ಇದನ್ನೆಲ್ಲ ಒಳಪಡಿಸುವುದು ಅಸಾಧ್ಯವೇ ಎನಿಸಿತು. 1667-75ರ ಆಫ್ಘನ್ ಯುದ್ಧಗಳಿಂದಾಗಿ ಔರಂಗಜೇಬ್‌ನಬೊಕ್ಕಸ ಬರಿದಾಗಿತ್ತು. ಆಫ್ಘನ್ ಸಿಪಾಯಿಗಳನ್ನು ಯುದ್ಧಕ್ಕೆ ಬಳಸಿಕೊಳ್ಳುವುದಂತೂ ಸಾಧ್ಯವಿರಲಿಲ್ಲ. ಶಿವಾಜಿಯ ವಿರುದ್ಧವಾಗಿ ಸೆಣಸುವುದು ಕಠಿಣವಾದುದಕ್ಕೆ ಇದೂ ಒಂದು ಕಾರಣ. 1669ರಲ್ಲಿ ಮಥುರಾದಲ್ಲಿ ಜಾಟರೂ 1671ರಲ್ಲಿ ಬುಂದೇಲ್ಖಂಡ ಮತ್ತು ಮಾಳ್ವದಲ್ಲಿ ಬುಂದೇಲರೂ 1672ರಲ್ಲಿ ಪಟಿಯಾಲದ ಶತಮಾನಿಗಳು ಆಳ್ವರದ ಮೇವಟಿಗಳೂ ದಂಗೆಯೆದ್ದರು. ಇವರನ್ನೆಲ್ಲ ನಿರ್ದಯೆಯಿಂದ ಔರಂಗಜೇಬ್ ಅಡಗಿಸಿದ. ಆದರೂ ಈ ದಂಗೆಗಳು ಮೊಗಲ್ ಆಳ್ವಿಕೆಯ ವಿರುದ್ಧ ಇದ್ದ ಶಕ್ತಿಗಳ ಪ್ರತೀಕಗಳಾಗಿದ್ದುವು. ಪಂಜಾಬಿನಲ್ಲಿ ಸಿಖ್ಖರಲ್ಲಿ ಜಾಗೃತಿ ಉಂಟಾಗಿತ್ತು. ಅವರೂ ಸಂಘಟಿತರಾಗುತ್ತಿದ್ದರು. 1663ರಲ್ಲಿ ತಮ್ಮ ಮೇಲೆ ಹೊರಿಸಲಾಗಿದ್ದ ಕೌಲನ್ನು ಅಸ್ಸಾಮಿನ ಅಹೋಂಗಳು ಕಿತ್ತೊಗೆದು 1671ರಲ್ಲಿ ತಮ್ಮ ನೆಲವನ್ನು ಮತ್ತೆ ಗೆದ್ದುಕೊಂಡರು. ಮರಾಠರಾದರೂ ಸುಮ್ಮನಿರಲಿಲ್ಲ. ಶಂಭೂಜಿಯ ತಮ್ಮ ರಾಜಾರಾಮನೂ ಅವನ ಮರಣಾನಂತರ ಅವನ ಪತ್ನಿ ತಾರಾಬಾಯಿಯೂ ಮೊಗಲರ ವಿರುದ್ಧ ಹೋರಾಟ ಮುಂದುವರಿಸಿದರು. ಔರಂಗಜೇಬನ ಕಣ್ಣಮುಂದೆಯೇ ಎಷ್ಟೋ ಪ್ರದೇಶಗಳು ಮರಾಠರ ವಶವಾದುವು. ಹೀಗೆ ಔರಂಗಜೇಬ್‌ನಆಳ್ವಿಕೆಯ ಕಾಲದ ಉತ್ತರಾರ್ಧವನ್ನೆಲ್ಲ (1681-1707) ಆತ ದಖನನ್ನು ಮೆಟ್ಟಿನಿಲ್ಲುವುದಕ್ಕೆ ವಿನಿಯೋಗಿಸಬೇಕಾಯಿತು. ಇದಕ್ಕಾಗಿ ಮಾಡಬೇಕಾಗಿಬಂದ ವೆಚ್ಚ ಅಗಾಧ. ಈ ಘಟನೆಗಳು ಮೊಗಲ್ ಸಾಮ್ರಾಜ್ಯವನ್ನು ವಿನಾಶದ ಹಾದಿಯಲ್ಲಿ ಕೊಂಡೊಯ್ದುವು. 1679-80ರ ರಜಪುತ ಯುದ್ಧದಲ್ಲಿ ಔರಂಗಜೇಬ್ ಗೆದ್ದಿದ್ದನಾದರೂ ಅಲ್ಲೂ ಈತ ಹಿಂದೂ ದೊರೆಗಳ ವಿರೋಧ ಗಳಿಸಿಕೊಂಡ. ಅಕ್ಬರನ ಸ್ನೇಹಮಾರ್ಗವನ್ನು ಈತ ಅನುಸರಿಸಲಿಲ್ಲ. ರಾಷ್ಟ್ರವೇ ಧರ್ಮಕ್ಕೆ ಅಧೀನವಾಯಿತು. ಕುರಾನಿನ ನ್ಯಾಯಕ್ಕನುಸಾರನಾಗಿ ರಾಜ್ಯವಾಳಲು ಯತ್ನಿಸಿದ ಈ ಸುನ್ನಿ ಮುಸಲ್ಮಾನ ಬುದ್ಧಿವಂತನಾದರೂ ಅವಿವೇಕಿ; ವಾಸ್ತವದೃಷ್ಟಿಹೀನ; ಮತಾಂಧ. ನಿಷ್ಠಾವಂತ ಮುಸ್ಲಿಮನ ನಿಷ್ಠುರ ನಿಯಮಗಳನ್ನೆಲ್ಲ ಈತ ತನ್ನ ಮೇಲೆ ವಿಧಿಸಿಕೊಂಡನಷ್ಟೇ ಅಲ್ಲ; ಇಡೀ ಚಕ್ರಾಧಿಪತ್ಯವನ್ನೇ ಇಸ್ಲಾಂ ಸಾಮ್ರಾಜ್ಯವಾಗಿ (ದಾರ್-ಉಲ್-ಇಸ್ಲಾಂ) ಪರಿವರ್ತಿಸಲೆತ್ನಿಸಿದ. ಇದರಿಂದ ಉದ್ಭವವಾದ ಅಸಹನೆಯ ನೆಲೆಗಟ್ಟಿನ ಮೇಲೆ ಆಡಳಿತ ನಡೆಸಲು ಯತ್ನಿಸಿದ್ದೇ ಔರಂಗಜೇಬನ ಆಳ್ವಿಕೆಯ ಮಹಾದುರಂತ. 1564ರಲ್ಲಿ ಅಕ್ಬರ್ ರದ್ದುಮಾಡಿದ್ದ ಜೆಸಿಯಾ ಕಂದಾಯವನ್ನು ಈತ 1679 ರಲ್ಲಿ ಮತ್ತೆ ವಿಧಿಸಿದ. ಉನ್ನತ ಹುದ್ದೆಗಳಿಗೆ ಹಿಂದೂಗಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಿದನೆಂದೂ ಅನೇಕ ಹಳೆಯ ಹಿಂದೂ ದೇವಸ್ಥಾನಗಳನ್ನು ನಾಶಗೊಳಿಸಿದನೆಂದೂ ಹೊಸದಾಗಿ ದೇಗುಲಗಳ ನಿರ್ಮಾಣ ಮಾಡಕೂಡದೆಂದು ವಿಧಿಸಿದನೆಂದೂ ಜೋಧಪುರದ ದೊರೆಯಾಗಿದ್ದ ಜಸ್ವಂತ್ ಸಿಂಗನ ಮಗನನ್ನು ಬಲಾತ್ಕಾರದಿಂದ ಹಿಡಿದು ಇಸ್ಲಾಂ ಮತಕ್ಕೆ ಪರಿವರ್ತಿಸಲು ಪ್ರಯತ್ನಸಿದನೆಂದೂ ಹೇಳಲಾಗಿದೆ. ವಿ. ರಾಘವೇಂದ್ರರಾಯರು ಹಿಂದೂ ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು ಎಂಬ ಪುಸ್ತಕದಲ್ಲಿ ಔರಂಗಜೇಬ್‌ನರಾಜ್ಯಭಾರದ ಬಗ್ಗೆ ಹೀಗೆ ಹೇಳುತ್ತಾರೆ; ಔರಂಗಜೇಬನ ರಾಜ್ಯವ್ಯವಹಾರ ಭಿನ್ನಾಭಿಪ್ರಾಯಗಳಿಗೆ ಗುರಿಯಾಗಿದೆ. ಮುಸಲ್ಮಾನರು ಇವನನ್ನು ಒಬ್ಬ ಪೀರ್ ಅಂದರೆ ಸಂತನೆಂದು ತಿಳಿದಿರುವರು. ಕೆಲವು ಹಿಂದೂಗಳು ಇವನನ್ನು ಅಸರೀ ಸ್ವಭಾವದವನೆಂದು ತಿಳಿದಿದ್ದಾರೆ. ಇವನಿಗೆ ಹಿಂದೂಗಳ ಮೇಲೆ ವೈಷಮ್ಯವಿದ್ದುದೇನೋ ನಿಜ. ಆದರೆ ಅದು ಅವನ ಮನಸ್ಸಿನಲ್ಲಿ ಏಕಾಏಕಿ ಹುಟ್ಟಲಿಲ್ಲ. ಪಟ್ಟಾಭಿಷಿಕ್ತನಾದ ಹತ್ತು ವರ್ಷಕಾಲ ಹಿಂದೂಗಳನ್ನು ರಕ್ಷಣೆಮಾಡಲು ಪ್ರಯತ್ನಪಟ್ಟ. ಕಾಶಿ

ದೇವಾಲಯದ ಅರ್ಚಕರಿಗೆ ಅವರ ಹಕ್ಕು ಬಾಧ್ಯತೆಗಳನ್ನು ಸುರಕ್ಷಿತವಾಗಿ ಪಾಲಿಸುವೆನೆಂದು ಒಂದು ಅಭಯಪತ್ರ ಕೊಟ್ಟ. ಕಾಲಕ್ರಮದಲ್ಲಿ ಧರ್ಮಬೋಧಕರ ಕೈಯ ಸೂತ್ರದ ಬೊಂಬೆಯಾದ. ಹಿಂದೂಗಳ ಮೇಲೆ ಜ಼ೆಸಿಯಾ ತಲೆಗಂದಾಯವನ್ನು ಹಾಕಿದ. ಇಸ್ಲಾಮೀ ರಾಜನೀತಿಯಲ್ಲಿ ಜಿಮ್ಮಿಗಳ ಪುರಾತನ ದೇವಾಲಯಗಳನ್ನು ಸುರಕ್ಷಿತವಾಗಿ ಇಡಬಹುದು; ಆದರೆ ಹೊಸ ದೇವಸ್ಥಾನಗಳ ಸ್ಥಾಪನೆಗೆ ಅವಕಾಶವಿಲ್ಲ. ಈ ನೀತಿಯನ್ನು ಅನುಸರಿಸಿ ಔರಂಗಜೇಬ್ ಅರ್ವಾಚೀನ ದೇವಸ್ಥಾನಗಳನ್ನು ನೆಲಸಮ ಮಾಡಬೇಕೆಂದು ಆಜ್ಞೆ ಇತ್ತ. ಇದೊಂದು ಸುಸಮಯವೆಂದು ತಿಳಿದು ಅಶಿಕ್ಷಿತರಾದ ಇವನ ಅಧಿಕಾರಿಗಳು ಹಿಂದಿನವು ಇಂದಿನವು ಎಂದು ಎಣಿಸದೆ ಎಲ್ಲಾ ದೇವಸ್ಥಾನಗಳನ್ನು ಲೂಟಿಮಾಡಿ ತಮ್ಮ ಚಕ್ರವರ್ತಿಯನ್ನು ಅಪಕೀರ್ತಿಗೆ ಗುರಿಮಾಡಿದರು; ರಾಜ್ಯದಲ್ಲಿ ದೊಡ್ಡ ಕ್ರಾಂತಿಯ ಬೀಜ ಬಿತ್ತಿದರು. ಔರಂಗಜ಼ೇಬನಿಗೆ ಹಿಂದೂಗಳಲ್ಲಿ ವ್ಯಕ್ತಿಶಃ ದ್ವೇಷವಿರಲಿಲ್ಲ. ರಜಪುತರಾಜರು ಮೊದಲಿನಂತೆ ಇವನ ಸೈನ್ಯದಲ್ಲಿ ದುಡಿದರು; ಇವನಿಗೋಸ್ಕರ ಕಾಬೂಲ್ ಪ್ರಾಂತ್ಯದಲ್ಲೂ ದಖನ್ ಪ್ರಾಂತ್ಯದಲ್ಲೂ ತಮ್ಮ ಜೀವಗಳನ್ನು ಅರ್ಪಿಸಿದರು. ಇವನ ಖಾಸ ಕಾರ್ಯದರ್ಶಿ ವಾಲೀರಾಮ್ ಹಿಂದೂ ಇವನ ಹಣಕಾಸಿನ ಮಂತ್ರಿಗಳಲ್ಲಿ ಒಬ್ಬನಾದ ರಘುನಂದನರಾಯನೂ ಹಿಂದೂವೇ. ಈ ಚಕ್ರವರ್ತಿ ಕೇವಲ ಸಂಕುಚಿತ ಮನಸ್ಕನಾಗಿ ಸ್ವಂತ ಮಕ್ಕಳನ್ನೂ ಕೂಡ ನಂಬಲಿಲ್ಲ. ಆದ್ದರಿಂದಲೇ ಇವನ ತನುಜರೂ ಇವನ ಮುಸಲ್ಮಾನ್ ಸರದಾರರೂ ಇವನ ಮೇಲೆ ದಂಗೆ ಎದ್ದು ರಾಜ್ಯವನ್ನು ಚೂರುಚೂರಾಗಿ ಮಾಡಿದರು. ಇವರು ಹಾಕಿದ ಮೇಲ್ಪಂಕ್ತಿಯನ್ನು ರಜಪುತರೂ ಮರಾಠರೂ ಸಿಖ್ಖರೂ ಅನುಸರಿಸಿದರು. ಇವರ ದಂಗೆ ಸ್ವರಾಜ್ಯಸ್ಥಾಪನೆಗೋಸ್ಕರ ಕೈಗೊಂಡದ್ದು; ಧರ್ಮವೈಷಮ್ಯದಿಂದ ಉದಿಸಿದುದು ಎಂಬುದು ನಿರಾಧಾರವಾದ ತಪ್ಪಿನ ಅಭಿಪ್ರಾಯ. ಮುಸಲ್ಮಾನರೂ ದಂಗೆಯೆದ್ದರು, ಹಿಂದೂಗಳೊಬ್ಬರೇ ಔರಂಗ್ಜೇಬನನ್ನು ಹಾಳು ಮಾಡಿದರೆಂಬುದು ತಪ್ಪಭಿಪ್ರಾಯ.

**ನಿಧನ**

ಈ ವಿಚಾರ ಹೇಗಾದರೂ ಇರಲಿ, ಔರಂಗಜೇಬ್ ದಖನ್ನನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲೇ ಅಹಮದ್ನಗರದಲ್ಲಿ ಸತ್ತ (1707ರ ಮಾರ್ಚ್ 3); ಅಶಾಂತಿಯ ಗೊಂದಲವನ್ನೆಬ್ಬಿಸಿ ಚಕ್ರಾಧಿಪತ್ಯವನ್ನು ತನ್ನ ಉತ್ತರಾಧಿಕಾರಿಗಳಿಗೆ ಬಿಟ್ಟುಹೋದ. ಇವನ ಜೀವಮಾನದ ಕಾಲದಲ್ಲೇ ಐರೋಪ್ಯ ಶಕ್ತಿಗಳು ಭಾರತದ ಮೇಲೆ ಕಣ್ಣುಹಾಕಿದ್ದುವು. ಈ ಸುಪ್ತ ಅಪಾಯವನ್ನು ಔರಂಗಜೇಬ್ ಕಂಡರಿಯಲಿಲ್ಲ. ಹಿಂದೂ-ಮುಸ್ಲಿಂ, ಷಿಯ-ಸುನ್ನಿ ಮುಂತಾದ ಬಗೆಬಗೆಯ ಒಡಕುಗಳನ್ನು ಹೆಚ್ಚಿಸಿ ಭಾರತವನ್ನು ಪಾಶ್ಚಾತ್ಯರ ಕೈಯಲ್ಲಿಡಲು ಈತನೂ ತನಗರಿವಿಲ್ಲದೆಯೇ ಕಾರಣನಾದ.

**ಕುಟುಂಬ**

ಔರಂಗಜೇಬ್‌ನಮುಖ್ಯ ಪತ್ನಿ ದಿಲ್ರಸ್ ಬಾನು ಬೇಗಂ. ಇವನಿಗೆ ಐವರು ಮಕ್ಕಳಿದ್ದರು. ತಾನು ತನ್ನ ತಂದೆಗೆ ಮಾಡಿದ್ದನ್ನೆ ತನ್ನ ಮಕ್ಕಳು ತನಗೂ ಮಾಡಿಯಾರೆಂದು ಈತ ಬಹಳ ಅಂಜಿದ್ದ. ಅವರನ್ನು ಆದಷ್ಟು ದೂರ ಇಟ್ಟಿದ್ದ. ಯಾರನ್ನೇ ಆಗಲಿ ನಂಬುವುದು ಇವನ ಸ್ವಭಾವವೇ ಅಲ್ಲ. ಈತನ ಮಕ್ಕಳ ಪೈಕಿ ಮಹಮ್ಮದ್ 1676ರಲ್ಲಿ ಗುಪ್ತ ಕೊಲೆಗೀಡಾದ. ಔರಂಗಜೇಬ್‌ನಅನಂತರ ಅಧಿಕಾರಕ್ಕೆ ಬಂದಾತ ಮುಅಜಮ್. ಮೂರನೆಯ ಅಜಂ. ಸಿಂಹಾಸನಕ್ಕಾಗಿ ನಡೆಸಿದ ಹೋರಾಟದಲ್ಲಿ ಈತ ಮಡಿದ. ನಾಲ್ಕನೆಯ ಮಗ ಅಕ್ಬರ್ ತಂದೆಯ ವಿರುದ್ಧವಾಗಿ ದಂಗೆ ಎದ್ದು ದೇಶಭ್ರಷ್ಟನಾಗಿ ಪರ್ಷಿಯಕ್ಕೆ ಹೋಗಿ ಅಲ್ಲಿ ಸತ್ತ (1704). ಕೊನೆಯ ಕಾಂ ಬಕ್ಷನೂ ಸಿಂಹಾಸನಕ್ಕಾಗಿ ನಡೆದ ಬಡಿದಾಟದಲ್ಲಿ 1700 ರಲ್ಲಿ ಪ್ರಾಣ ತೆತ್ತ.

# ಮೊಘಲ್ ಸಾಮ್ರಾಜ್ಯದ ಪತನದ ಕಾರಣಗಳು

1. ಮೊಘಲ್ ಸಾಮ್ರಾಜ್ಯದ ವಿಸ್ತಾರ –ಅಧಕ್ಷ ಆಡಳಿತ
2. ಔರಂಗಜೇಬನ ಸ್ವಭಾವ-ಸಂಶಯ ಸಂಕುಚಿತ ಪ್ರವೃತಿ
3. ಔರಂಗಜೇಬನ ಮುತ್ಸದ್ಧಿತನದ ಕೊರತೆ.
4. ಔರಂಗಜೇಬನ ಸಂಕುಚಿತ ಧಾರ್ಮಿಕ ನೀತಿ.
5. ಔರಂಗಜೇಬನ ರಜಪೂತ ನೀತಿ.
6. ಔರಂಗಜೇಬನ ದಕ್ಷಿಣದ ನೀತಿ.
7. ಔರಂಗಜೇಬನ ಹಿಂದೂ ನೀತಿ.
8. ಉತ್ತರಾಧಿಕಾರದ ಹೋರಾಟಗಳು.
9. ಔರಂಗಜೇಬನ ಕಾಲದಲ್ಲಿ ನಡೆದ ದಂಗೆಗಳು.
10. ಔರಂಗಜೇಬನ ಆರ್ಥಿಕ ದಿವಾಳಿತನ.
11. ಔರಂಗಜೇಬನ ಅಶಕ್ತ-ಅದಕ್ಷ ಉತ್ತರಾಧಿಕಾರಿಗಳು.
12. ಮರಾಠರ ಏಳ್ಗೆ
13. ನಾದೀರ್ ಷಹಾ ಮತ್ತು ಅಹ್ಮದ್ ಷಹಾ ಅಬ್ದಾಲಿಯ ದಾಳಿಗಳು

**1. ಮೊಘಲ್ ವಿಶಾಲವಾದ ಸಾಮ್ರಾಜ್ಯದ ವಿಸ್ತಾರ –ಅಧಕ್ಷ ಆಡಳಿತ.**

ಮೊಘಲ್ ಸಾಮ್ರಾಟರು ಉತ್ತರದ ವಾಯುವ್ಯದ ಕಂದಹಾರದಿಂದ ಗೊಲ್ಕಂಡದವರೆಗೂ ಮತ್ತು ಸೌರಾಷ್ಟ್ರದಿಂದ ಬಂಗಾಳದವರೆಗೂ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರು. ಅಕ್ಬರನ ಆಡಳಿತ ನೀತಿ ಮತ್ತು ಅವನು ಅನುಸರಿಸಿದ ಜಾತ್ಯತೀತ ನಿಲುವುಗಳಿಂದ ಸಮೃದ್ಧಿ ಹಾಗೂ ಸುರಕ್ಷಿತವಾಗಿತ್ತು. ನಂತರ ಜಹಾಂಗೀರ ಮತ್ತು ಷಹಜಹಾನರು ಇದೇ ನೀತಿಯನ್ನು ಮುಂದುವರಿಸಿದನು. ಆದರೆ ಔರಂಗಜೇಬನು ಈ ನೀತಿಯನ್ನು ಬಿಟ್ಟು ತನ್ನದೇ ಬೇರೆ ವಿರೋಧಿ ನೀತಿಯನ್ನು ಅನುಸರಿಸಿದನು. ಇದರಿಂದ ಆಡಳಿತದಲ್ಲಿ ಅಧಕ್ಷತೆ ಪ್ರಾರಂಬವಾಗಿ ಬ್ರಷ್ಟಾಚಾರ ವ್ಯಾಪಕವಾಯಿತು. ಆಡಳಿತದಲ್ಲಿ ನಿಯಂತ್ರಣ ತಪ್ಪಿತು. ವಿಶಾಲವಾದ ಸಾಮ್ರಾಜ್ಯ ಔರಂಗಜೇಬನಿಗೆ ಮುಳುವಾಯಿತು. ವಾಯುವ್ಯದ ದಂಗೆ ಅಡಗಿಸಲು ಅಲ್ಲಿಗೆ ಹೋದರೆ, ದಕ್ಷಿಣದಲ್ಲಿ ದಂಗೆಗಳು ಪ್ರಾರಂಬವಾಗುತ್ತಿದ್ದವು. ದಕ್ಷಿಣಕ್ಕೆ ಬಂದರೆ ಉತ್ತರದಲ್ಲಿ ಪ್ರಾರಂಬವಾಗುತ್ತಿದ್ದವು. ಹೀಗೆ ಸಾಮ್ರಾಜ್ಯದಲ್ಲೆಡೆ ದಂಗೆಗಳಿಂದ ಆಡಳಿತ ಯಂತ್ರ ಸಂಪೂರ್ಣ ಕುಸಿಯಿತು. ಇದು ಮೊಘಲ್ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು.

**2. ಔರಂಗಜೇಬನ ಸ್ವಭಾವ-ಸಂಶಯ ಸಂಕುಚಿತ ಪ್ರವೃತಿ.**

ಔರಂಗಜೇಬನು ತನ್ನ ಸಹೋದರ ಮತ್ತು ತಂದೆಯನ್ನೆ ನಂಬದ ಸಂಶಯದ ವ್ಯಕ್ತಿಯಾಗಿದ್ದನು. ಆಡಳಿತದಲ್ಲಿ ಇತನು ಯಾರನ್ನು ನಂಬುತ್ತಿರಲಿಲ್ಲ. ಎಲ್ಲರನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿದ್ದನು. ಇದರಿಂದ ಅವನ ಸೈನಿಕ ದಂಡನಾಯಕರು, ಮನ್ಸಬ್ದಾರರು ಮತ್ತು ಆಡಳಿತದ ಪ್ರಮುಖರು ಸಾಮ್ರಾಟನ ಬಗ್ಗೆ ಅಸಮದಾನಗೊಂಡಿದ್ದರು. ಸಮಯ ಸಿಕ್ಕಾಗ ದಂಗೆ ಏಳುತ್ತಿದ್ದರು. ಇದು ಮೊಘಲ್ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು.

**3. ಔರಂಗಜೇಬನ ಮುತ್ಸದ್ಧಿತನದ ಕೊರತೆ.**

ಔರಂಗಜೇಬನು ಅತ್ಯಂತ ಧೈರ್ಯಶಾಲಿ, ಅಪ್ರತೀಮ ವೀರಯೋಧನಾಗಿದ್ದರೂ, ಅಕ್ಬರನಂತೆ ರಾಜನೀತಿ ಚತುರನಾಗಿರಲಿಲ್ಲ. ವಿಶಾಲ ಭಾರತವು ವಿಭಿನ್ನ ಭಾಷೆ, ಸಂಸ್ಕೃತಿ, ಧರ್ಮ, ಜಾತಿಗಳಿಂದ ಕೂಡಿತ್ತು. ವಿವಿಧತೆಯಿಂದ ಕೂಡಿದ ಭಾರತವನ್ನು ಸಂಘಟಿಸುವ ವಿಶಾಲ ಮನೋಭಾವನೆ ಇತನ ಕೊರತೆಯಾಗಿತ್ತು. ಸಂದರ್ಭಕ್ಕೆ ತಕ್ಕಂತೆ ಇತನು ವ್ಯವಹರಿಸಿದ್ದರೆ, ದೂರದೃಷ್ಠಿಯನ್ನು ತೋರಿದ್ದರೆ ಸಾಮ್ರಾಜ್ಯದ ಪತನವನ್ನು ತಡೆಯಬಹುದಿತ್ತು. ಆದರೆ ಪರಿಸ್ಥಿತಿ ಮಿತಿಮಿರಿದ್ದರಿಂದ ಪತನ ಅನಿವಾರ್ಯವಾಯಿತು.

**4. ಔರಂಗಜೇಬನ ಸಂಕುಚಿತ ಧಾರ್ಮಿಕ ನೀತಿ.**

ಔರಂಗಜೇಬನು ಅಧಿಕಾರಕ್ಕೆ ಬರುತ್ತಲೇ ಅಕ್ಬರನ ಧಾರ್ಮಿಕನೀತಿಯಾದ "ಫುಲ್-ಏ-ಕುಲ್" ಅಂದರೆ ಸರ್ವರಿಗೂ ಶಾಂತಿನೀತಿಯನ್ನು ಬಿಟ್ಟು ಅದಕ್ಕೆ ವಿರೋಧವಾಗಿ "ದರ್-ಉಲ್-ಇಸ್ಲಾಂ" ನೀತಿ ಅನುಸರಿಸಿ ಭಾರತವನ್ನು ಇಸ್ಲಾಮ್ ಸಾಮ್ರಾಜ್ಯವನ್ನಾಗಿ ಪರಿವರ್ತಿಸುವ ಗುರಿ ಹೊಂದಿದ್ದನು. ಇದಕ್ಕಾಗಿ ಮುಸ್ಲೀಂಯೇತರರ ಮೇಲೆ ದಬ್ಬಾಳಿಕೆ ಶೋಷಣೆ ಪ್ರಾರಂಬಿಸಿದನು. ಬಲತ್ಕಾರದ ಮತಾಂತರ, ಹಿಂದು ದೇವಾಲಯಗಳ

ನಾಶ, ರಜಪೂತ ಮತ್ತು ಹಿಂದು ಮನ್ಸಬ್ದಾರರ ವಜಾ, ಜಿಜಿಯಾ ತೆರಿಗೆ, ಯಾತ್ರಿಕ ತೆರಿಗೆ, ಮುಂತಾದ ಅಮಾನವೀಯ ಕ್ರಮಗಳನ್ನು ಪುನಃ ಜಾರಿಗೆ ತಂದನು. ಇದರಿಂದ ಬಹುಸಂಖ್ಯಾತರರ ವಿರೋಧ ಕಟ್ಟಿಕೊಂಡು ಪತನಕ್ಕೆ ಕಾರಣನಾದನು.

**5. ಔರಂಗಜೇಬನ ರಜಪೂತ ನೀತಿ.**

ಅಕ್ಬರನು ರಜಪೂತರ ಶಕ್ತಿ, ಅವರ ದೇಶಭಕ್ತಿ, ಅವರ ಸ್ವಾಮಿನಿಷ್ಠೆ, ಅವರ ಪ್ರಮಾಣಿಕತೆ, ಸಹಾಸಗಳನ್ನು ಕಂಡು, ವಿಶಾಲ ಸಾಮ್ರಾಜ್ಯ ರಕ್ಷಣೆಗೆ ಅವರ ಅನಿವಾರ್ಯತೆಯನ್ನು ಮನಗೊಂಡು, ಅವರ ಸಹಕಾರ, ವಿಶ್ವಾಸ ಗಳಿಸಲು ಪ್ರಯತ್ನಿನಿಸಿ ಯಸಶ್ವಿಯಾಗಿದ್ದನು. ಆದರೆ ಔರಂಗಜೇಬನು ಇದಕ್ಕೆ ವಿರೂದ್ಧವಾಗಿ ನಡೆದು ರಜಪೂತರ ಆಕ್ರೋಶಕ್ಕೆ ಕಾರಣನಾದನು. ಇದುಸಹ ಪತನಕ್ಕೆ ಕಾರಣವಾಯಿತು.

**6. ಔರಂಗಜೇಬನ ದಕ್ಷಿಣದ ನೀತಿ.**

ಡಾ|| ಜೆ.ಎನ್. ಸರ್ಕಾರ " ಸ್ಪೇನಿನ ಹುಣ್ಣು ನೇಪೊಲಿಯನ್ನನ ಪತನಕ್ಕೆ ಕಾರಣವಾದಂತೆ ದಕ್ಷಿಣದ ಹುಣ್ಣು ಔರಂಗಜೇಬನ ಪತನಕ್ಕೆ ಕಾರಣವಾಯಿತು " ಎಂದು ಹೇಳಿದ್ದಾರೆ. ಔರಂಗಜೇಬನು ದಕ್ಷಿಣದ ಷಿಯಾ ರಾಜ್ಯಗಳಾದ ಕೋಲಕೊಂಡ, ಅಹ್ಮದನಗರ, ಮತ್ತು ಬಿಜಾಪೂರಗಳನ್ನು ಸದೆಬಡಿಯಲು ಅಪಾರ ಹಣ ಮತ್ತು ಸೈನ್ಯವನ್ನು ಖರ್ಚುಮಾಡಿದನು. ಸುಮಾರು 25 ವರ್ಷಗಳವರೆಗೆ ದಕ್ಷಿಣ ಭಾರತದದಲ್ಲಿಯ ದಂಗೆ, ದಾಳಿ, ಅರಾಜಕತೆ ಮತ್ತು ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ವಾರಂಗಜೇಬನು ಕಳೆದನು. ಕೋನೆಗೂ ಇಲ್ಲಿಯೇ ಮರಣ ಹೊಂದಿದನು. ಡಾ|| ವಿ.ಎ.ಸ್ಮಿತ್ "ದಕ್ಷಿಣದ ನೀತಿಯು ಔರಂಗಜೇಬನ ದೇಹಕ್ಕೂ, ಮತ್ತು ಮೊಘಲ್ ಸಾಮ್ರಾಜ್ಯಕ್ಕೂ ಮಸಣವಾಯಿತು " ಎಂದಿದ್ದಾರೆ.

**7. ಔರಂಗಜೇಬನ ಹಿಂದೂ ನೀತಿ.**

ಔರಂಗಜೇಬನು ಹಿಂದು ವಿರೋಧಿ ಕ್ರಮಗಳಾದ ಜಿಜಿಯಾ ತೆರಿಗೆ, ಯಾತ್ರಿಕರ ತೆರಿಗೆ, ದೇವಾಲಯಗಳ ನಾಶ, ಬಲತ್ಕಾರದ ಮತಾಂತರ ಹಿಂದೂ ಆಡಳಿತಾಧಿಕಾರಿಗಳನ್ನು ವಜಾ ಗೋಳಿಸುವ ನೀತಿಯನ್ನು ಅನುಸರಿಸಿ, ಬಹುಸಂಖ್ಯಾತರರ ವಿರೋಧವನ್ನು ಕಟ್ಟಿಕೊಂಡನು. ಅಸಮದಾನಗೊಂಡ ಹಿಂದುಗಳ ಅಸಹಕಾರ ಮೊಘಲ್ ಸಾಮ್ರಾಜ್ಯದ ಅವನತಿಗೆ ಕಾರಣವಾಯಿತು.

**8. ಉತ್ತರಾಧಿಕಾರದ ಹೋರಾಟಗಳು.**

ಔರಂಗಜೇಬನಿಗೆ ವಿವಿಧ ಐದು ಜನ ರಾಣಿಯರಿಂದ ಐದು ಜನ ಪುತ್ರರಿದ್ದರು. ಅವರಲ್ಲಿ ಮಹಮ್ಮದ್ ಅಜಮ್ ಷಾ, ಸುಲ್ತಾನ ಮೊಹಮದ ಅಕ್ಬರ, ಮುಹಮ್ಮದ್ ಸುಲ್ತನ್, ಬಹದ್ದೂರ ಷಹಾ, ಮಹಮ್ಮದ್ ಕಾಮ್ ಬಕ್ಷ್, ಇವರಲ್ಲಿ ಸುಲ್ತಾನ ಮೊಹಮದ ಅಕ್ಬರ ತಂದೆಯ ನೀತಿಯನ್ನು ವಿರೋಧಿಸಿ ದಂಗೆ ಎದ್ದನು. ಔರಂಗಜೇಬನು ಅತ್ಯಂತ ಚಾಣಕ್ಷತೆಯಿಂದ ಮಗನ ದಂಗೆಯನ್ನು ಹತ್ತಿಕ್ಕಿದನು. ನಿರಾಸೆಯಿಂದ ಹತಾಶನಾಗಿ ರಾಜಕುಮಾರ ಅಕ್ಬರ ಪರ್ಶಿಯಾಕ್ಕೆ ಪಲಾಯನ ಮಾಡಿ ಅಲ್ಲಿಯೇ ಮರಣ ಹೊಂದಿದನು. ಔರಂಗಜೇಬನ ಇತರ ಮಕ್ಕಳು ಸಿಂಹಾಸನಕ್ಕಾಗಿ ಮರಾಠರ ಸಹಾಯ ಪಡೆಯಲಾರಂಬಿಸಿದರು. ಇದರಿಂದಾಗಿ ಅಸಮರ್ಥರಾದ ಉತ್ತರಾಧಿಕಾರಿಗಳಿಂದ ಮೊಘಲ್ ಸಾಮ್ರಾಜ್ಯ ಪತನವಾಯಿತು.

**9. ಔರಂಗಜೇಬನ ಕಾಲದಲ್ಲಿ ನಡೆದ ದಂಗೆಗಳು.**

ಔರಂಗಜೇಬನ ಆಡಳಿತ, ಹಿಂದು ವಿರೋಧ ನೀತಿ, ರಜಪೂತ ನೀತಿ, ಮತ್ತು ಷಿಯಾ ವಿರೋಧಿ ನೀತಿಯಿಂದಾಗಿ ದೇಶದಲ್ಲೇಡೆ ದಂಗೆಗಳು ಪ್ರಾರಂಬವಾದವು. ಗುಜರಾತ, ರಾಜಸ್ಥಾನ, ಮತ್ತು ಮಾಳವಗಳಲ್ಲಿಯ ಜಾಟಜನಾಂಗದವರು ಮುಸ್ಲೀಮ್‌ರ ಮತ್ತು ಔರಂಗಜೇಬನ ವಿರೋಧ ದಂಗೆಗಳನ್ನು ಪ್ರಾರಂಬಿಸಿದರು. ದಕ್ಷಿಣದಲ್ಲಿ ಮರಾಠ, ಪಂಜಾಬದಲ್ಲಿ ಸಿಕ್ಕರು, ಬುಂದೇಲಖಂಡದಲ್ಲಿ ಬುಂದೇಲರು, ದೆಹಲಿಯ ಬಳಿ ಸತ್ನಮಿಯರು, ಮತ್ತು ರಜಪೂತರು ದಂಗೆಗಳನ್ನು ಪ್ರಾರಂಬಿಸಿದರು. ಈ ದಂಗೆಗಳನ್ನು ಅಡಗಿಸುವಲ್ಲಿ ವಿಫಲನಾದ ಔರಂಗಜೇಬನು ಮೊಘಲರ ಪತನಕ್ಕೆ ಕಾರಣನಾದನು.

**10. ಔರಂಗಜೇಬನ ಆರ್ಥಿಕ ದಿವಾಳಿತನ.**

ಔರಂಗಜೇಬನು ಅನುಸರಿಸಿದ ನೀತಿಗಳಿಂದ ಸಾಮ್ರಾಜ್ಯದ ಆರ್ಥಿಕರಂಗದ ಮೇಲೆ ಮತ್ತು ಖಜಾನೆಯ ಮೇಲೆ ಅನೇಕ ಕೆಟ್ಟ ಪರಿಣಾಮಗಳೂಂಟಾದವು. ಹಿಂದು ಅಧಿಕಾರಿಗಳು ವಜಾಗೊಂಡಿದ್ದರಿಂದ ಆಡಳಿತದಲ್ಲಿ ಅದಕ್ಷತೆ ಹೆಚ್ಚಿತು. ನಿಷ್ಠೆಯಿಂದ ತೆರಿಗೆ ಕಟ್ಟುತ್ತಿದ್ದ ಹಿಂದು ರೈತರು, ಕುಶಲಕರ್ಮಿಗಳು, ಉದ್ದೇಮೆದಾರರು, ಮತ್ತು ವ್ಯಾಪಾರಸ್ಥರು ತೆರಿಗೆ ಕಟ್ಟುವದನ್ನು ನಿಲ್ಲಿಸಿದರು. ಹಿಂದುಗಳ ಜಾತ್ರೆಗಳಿಂದ ಹಬ್ಬಹರಿಗಳಿಂದ ವರಮಾನ ನಿಂತುಹೋಯಿತು. ಬಹಳಷ್ಟು ಜನ ಹಿಂದು ವ್ಯಾಪಾರಸ್ಥರು ಮೊಘಲರ ಕಿರುಕುಳಯಿಂದ ದಕ್ಷಿಣ ಭಾರತದ ಕಡೆ ವಲಸೆ ಹೊದರು. ವಿದೇಶಿಗರಾದ ಪೋರ್ಚಗೀಸರು, ಡಚ್ಚರು, ಮತ್ತು ಬ್ರಿಟಿಷರು ತಮ್ಮ ವ್ಯವಹಾರ ಉತ್ತರದಲ್ಲಿ ಕಡಿತಗೋಳಿಸಿ, ದಕ್ಷಿಣದ ಕಡೆ ಹೆಚ್ಚಿಸಿದರು. ಇದರಿಂದ ಮೊಘಲರ ಖಜಾನೆಗೆ ಬರುತ್ತಿದ್ದ ವರಮಾನ ಕಡಿಮೆಯಾಯಿತು. ಮೇಲಾಗಿ ದಂಗೆಗಳನ್ನು ಅಡಗಿಸಲು ಹಾಗೂ ದಕ್ಷಿಣದ

ಯುದ್ಧಗಳಿಂದ ಅಪಾರ ಹಣ ವೆಚ್ಚ ಮಾಡಬೇಕಾಯಿತು. ಹೀಗಾಗಿ ಮೊಘಲ ಸಾಮ್ರಾಜ್ಯ ಆರ್ಥಿಕ ದಿವಾಳಿಯಾಯಿತು. ಇದು ಮೊಘಲ ಸಾಮ್ರಾಜ್ಯದ ಪತನಕ್ಕೂ ಕಾರಣವಾಯಿತು.

**11. ಔರಂಗಜೇಬನ ಅಶಕ್ತ-ಅದಕ್ಷ ಉತ್ತರಾಧಿಕಾರಿಗಳು.**

ಔರಂಗಜೇಬನು ಕ್ರಿ.ಶ 1707 ರಲ್ಲಿ ಮರಣಹೊಂದಿದನು. ಇತನ ಮರಣದ ನಂತರ ಆಳಿದ ಮೊಘಲ ಅರಸರು ಅಸಮರ್ಥರು, ಅಲಿಸಿಗಳು ಮತ್ತು ವಿಲಾಸಿಪ್ರೀಯರಾಗಿದ್ದರು. ಇದರಿಂದ ಇವರ ಪ್ರಾಂತಗಳು ಕಾಲಕ್ರಮೇಣ ಸ್ವತಂತ್ರ್ಯ ರಾಜ್ಯವಾಗತೊಡಗಿದವು. ಹೀಗಾಗಿ ಔರಂಗಜೇಬನ ಮರಣದ ನಂತರ ಮೊಘಲರ ಉತ್ತರಾಧಿಕಾರಿ ಅರಸರು ತಮ್ಮ ಪೂರ್ವಜರ ಚಕ್ರಾಧಿಪತ್ಯದ ಘನತೆ ಗೌರವಗಳನ್ನು ರಕ್ಷಿಸುವಲ್ಲಿ ವಿಫಲರಾದರು. ಇದರಿಂದಾಗಿ ಇವರ ಅಧಿಕಾರವು ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಸೀಮಿತವಾಯಿತು.

**12. ಮರಾಠರ ಏಳ್ಗೆ**

ಔರಂಗಜೇಬನು ಮರಾಠರ ನಾಯಕ ಶಿವಾಜಿಯ ಶಕ್ತಿ, ಸಾಮರ್ಥ್ಯ, ಸ್ವಧರ್ಮ, ಮತ್ತು ಸ್ವದೇಶಾಭಿಮಾನವನ್ನು ಅರಿಯುವಲ್ಲಿ ವಿಫಲನಾದನು. ದಕ್ಷಿಣ ಭಾರತದಲ್ಲಿ ಷಾಹಿ ಸುಲ್ತಾನರನ್ನು ಹತ್ತಿಕ್ಕಲು ಮರಾಠರ ಸಹಾಯ ಪಡೆಯ ಬಹುದಾಗಿತ್ತು. ಶಿವಾಜಿಯ ಶಕ್ತಿಯನ್ನರಿಯದೇ ಗುಡ್ಡದ ಇಲಿ (ಬೆಟ್ಟದ ಇಲಿ) ಎಂದು ಕರೆದು ಮರಾಠರನ್ನು ಕಡೆಗಣಿಸಿದನು. ಅವನನ್ನು ಅಸ್ಥಾನಕ್ಕೆ ಕರೆಯಿಸಿ ಅವಮಾನಿಸಿ ಬಂಧಿಸಿದ್ದು ಔರಂಗಜೇಬನ ಪ್ರಮಾದವಾಗಿತ್ತು. ಇದರಿಂದ ರೊಚ್ಚಿಗೆದ್ದ ಮರಾಠರು ಅವನ ರಾಜಧಾನಿಯಲ್ಲಿಯೇ ಪಿತೂರಿ ಮಾಡಿ ಶಿವಾಜಿಯನ್ನು ಬಂಧನದಿಂದ ಪಾರು ಮಾಡಿದರು. ಮುಂದೆ ಈ ಬೆಟ್ಟದ ಇಲಿ ಬೆಟ್ಟದ ಹುಲಿಯಾಗಿ ಮೊಘಲರ ಕೋಟೆಗಳನ್ನು ಧ್ವಂಸ ಮಾಡಿ, ಲೂಟಿ ಮಾಡಲಾರಂಬಿಸಿದನು. ಗೆರಿಲ್ಲಾ ಯುದ್ಧ ನೀತಿಯಿಂದ ಮೊಘಲ ಸೈನ್ಯಕ್ಕೆ ವಿಪರೀತವಾಗಿ ಕಾಡಿದನು. ಸ್ವತಃ ಔರಂಗಜೇಬನೇ ದಕ್ಷಿಣಕ್ಕೆ ಧಾವಿಸಿದನು. ಇದರಿಂದ ಉತ್ತರ ಭಾರತದ ರಾಜಕೀಯ ಅಸ್ಥಿರತೆಯಿಂದಾಗಿ ಆಡಳಿತ ಯಂತ್ರ ಕುಸಿಯಿತು. ಮುಂದೆ ಮರಾಠರು ಭಾರತದ ಶಕ್ತಿಶಾಲಿ ಸಾಮ್ರಾಟರಾಗಿ ಮೊಘಲರ ರಾಜಕೀಯ ನಿಯಂತ್ರಕರಾದರು. ಹೀಗೆ ಮರಾಠರ ಏಳ್ಗೆ ಮೊಘಲರ ಪತನಕ್ಕೆ ಕಾರಣವಾಯಿತು.

**13. ನಾದೀರ್ ಷಹಾ ಮತ್ತು ಅಹ್ಮದ್ ಷಹಾ ಅಬ್ದಾಲಿಯ ದಾಳಿಗಳು**

ಔರಂಗಜೇಬನ ಕಾಲದಲ್ಲಿ ಮೊಘಲರ ವಿರೋಧ ನಡೆದ ಅನೇಕ ದಂಗೆಗಳಿಂದಾಗಿ ಮೊಘಲರ ಸೈನ್ಯ ಅಧಃಪತನವಾಗಿತ್ತು. ನಂತರದಲ್ಲಿ ಆಳಿದ ಮೊಘಲ ಅರಸರು ಅಸಮರ್ಥರು, ಅಲಿಸಿಗಳು ಮತ್ತು ವಿಲಾಸಿಪ್ರೀಯರಾಗಿದ್ದರು. ಇದರಿಂದ ರಕ್ಷಣಾ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿತ್ತು. ಇವರ ಬಲಹೀನತೆ ಅರಿತ ಅಫಘನ ಸುಲ್ತಾನರಾದ ನಾದೀರ್ ಷಹಾ ಮತ್ತು ಅಹ್ಮದ್ ಷಹಾ ಅಬ್ದಾಲಿ ಭಾರತದ ಮೇಲೆ ನಿರಂತರ ದಾಳಿಗಳನ್ನು ಮಾಡಿದರು. ಈ ದಾಳಿಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಅಶಕ್ತ ಮೊಘಲ ಸಾಮ್ರಾಟರು ವಿಫಲರಾದರು. ಇದರಿಂದ ಮೊಘಲರ ಪತನಕ್ಕೆ ಇದು ಸಹ ಕಾರಣವಾಯಿತು.